


International Journal of Kannada Research
www.kannadajournal.com

**ISSN: 2454–5813**
IJKR 2022; 8(3): 113-115
© 2022 IJKR
www.kannadajournal.com
Received: 23-06-2022
Accepted: 28-07-2022

**ಡಾ. ಕವಿತ ಬಿ. ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ. ಡಿ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಕವಿತ ಬಿ. ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ. ಡಿ ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಕರ್ನಾಟಕ, ಭಾರತ

# ಕೇಡಿನ ತೀವ್ರತೆ ಹೆಣ್ಣಿನ ದುರಂತತೆಗೆ ಕಥಾಸಾಕ್ಷಿಯಾದ 'ಆಬೋಲೀನಾ'

**ಡಾ. ಕವಿತ ಬಿ. ಎನ್**

**DOI:** https://doi.org/10.22271/24545813.2022.v8.i3b.927

**ಪೀಠಿಕೆ**

ದುರಂತತೆಯ ಪರಿಕಲ್ಪನೆಯು ಎಲ್ಲಾ ಭಾಷಾ ಭಾವಪ್ರಪಂಚದೊಳಗೆ ಗೋಚರಿಸಿದರೂ ಸಾಹಿತ್ಯದಾಳದಲ್ಲಿ ಅಭಿವ್ಯಕ್ತಿಯ ಮಾಧ್ಯಮವನ್ನಾಗಿಸಿಕೊಂಡು ಯಶಸ್ಸು ಕಂಡಶೈಲಿ ಪಾಶ್ಚಾತ್ಯರದ್ದು. ಗ್ರೀಕ್‌ಮೂಲದಿಂದ ಕಾಣಿಸಿಕೊಂಡ ದುರಂತತೆಯ ಕಲ್ಪನೆ ಹಲವು ಗ್ರೀಕ್‌ಮಹಾಕಾವ್ಯಗಳಲ್ಲಿ, ನಾಟಕಗಳಲ್ಲಿ ಒಂದು ಕಾಲದ ಮಟ್ಟಿಗೆ ತನ್ನ ಪರಾಕಾಷ್ಠೆಯನ್ನು ಪ್ರದರ್ಶಿಸಿತು. ಭಾರತೀಯ ಕಾವ್ಯಗಳು ಇಂತಹ ದುರಂತ ಪರಿಕಲ್ಪನೆಯಿಂದ ಪರಾಗ್ಮುಖವಾದ ಕಾರಣ ಸುಖದುಃಖಗಳ ನಡುವೆ ಜೀವನ ಸಾರವನ್ನು, ಸಾರ್ಥಕತೆಯ ಭಾವವನ್ನು ನಿರೂಪಿಸಿ ಕಾವ್ಯದ ಅಂತಿಮ ಘಟ್ಟ ಮಾತ್ರ ಸುಖಾಂತ್ಯದಲ್ಲಿ ನಿಲ್ಲುವುದು ಸಹಜವಾಗಿತ್ತು. ಭಾರತೀಯ ಕಲ್ಪನೆಯ ಅನೇಕ ಪುರಾಣಗಳು, ಕಾವ್ಯಗಳ ಅಂತ್ಯ ಇಂಥ ಸುಖದ ಸಾತತ್ಯವನ್ನೆ ಬಯಸಿದಂತದ್ದು ಮಾತ್ರ ಪರಮ ಸತ್ಯ.

ಭಾರತ ಭಿನ್ನ ಸಂಸ್ಕೃತಿ ಪ್ರಧಾನವಾದ ತವರೂರು. ಮೂಲತಃ ಸಂಸ್ಕೃತಿ ಸಂಪ್ರದಾಯ ಪ್ರಧಾನ ನೆಲೆಯಾದ ಭಾರತ ಸುಖದ ಪರಿಕಲ್ಪನೆಯ ಅಭಿರುಚಿಯಲ್ಲಿ ಆಸಕ್ತಿ ಹೊಂದಿದ ಕಾರಣದಿಂದ ದುಃಖದ ಪರಿಕಲ್ಪನೆಯನ್ನು ಪರಿಭಾವಿಸಲು ಹಿಂಜರಿಯುವುದು ಈ ನೆಲದ ಪರಂಪರೆಯಾಗಿದೆ. ಭಾರತೀಯ ಮಹಾಕಾವ್ಯಗಳಲ್ಲಿ ಪುರಾಣಗಳ ಮಧ್ಯಂತರದಲ್ಲಿ ಬರುವ ದುಃಖದ ಭಾವವನ್ನೇ ಸಹಿಸಲಾರದಂಥ ಸಂಸ್ಕೃತಿ ಹೊಂದಿರುವ ಭಾರತೀಯರು;ದುರಂತತೆಯ ಪರಿಕಲ್ಪನೆಯನ್ನು ಸ್ವೀಕರಿಸುವ ಮನೋಭಾವವೇ ಕಷ್ಟಕರವಾದದ್ದು.

ಪಾಶ್ಚಾತ್ಯರಿಂದಾದ ದುರಂತ ಪ್ರಜ್ಞೆಯ ಸಾಹಿತ್ಯ ರಚನೆಯ ಅಂತಿಮ ಸಾರದುರಂತದ ತೀವ್ರತೆಯ ಭಾವವೇ ಆದರೂ ಅದರ ಹಿಂದಿರುವ ಮನುಷ್ಯನ ದುಷ್ಟತೆ ಅದರ ಪರಿಣಾಮವನ್ನು ಪರಿಚಯಿಸುವುದು. ಕಾರಣ ಅವರಲ್ಲಿ ಈ ಪರಿಕಲ್ಪನೆ ಗಳಿಸಿದ ಯಶಸ್ಸನ್ನು ಭಾರತೀಯ ಸಾಹಿತ್ಯದಲ್ಲಿ ಕಾಣಲು ಸಾಧ್ಯವಾಗಲಿಲ್ಲವಾದರೂ ಅದರ ಛಾಯೆ ಮಾತ್ರ ಭಾರತೀಯ ಯಾವ ಸಾಹಿತ್ಯದಲ್ಲಿಯೂ ಪ್ರಭಾವಿಸದೇ ಇರಲು ಸಾಧ್ಯವಾಗಲಿಲ್ಲ. ಹೀಗೆ ಕನ್ನಡದಲ್ಲಿಯೂ ಪಾಶ್ಚಾತ್ಯದ ಪ್ರೇರಣೆಯಿಂದ ಕಾಣಿಸಿಕೊಂಡ ದುರಂತತೆಯ ಕಲ್ಪನೆ ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಾದ ಕಾವ್ಯ, ಕಾದಂಬರಿ, ಕಥೆ, ನಾಟಕ ಹೀಗೆ ಎಲ್ಲಾ ಕ್ಷೇತ್ರದಲ್ಲಿಯೂ ತನ್ನ ಛಾಪನ್ನು ಬೀರಿತು.

ದುರಂತತೆಯ ಪರಿಕಲ್ಪನೆಯನ್ನು ಕುರಿತಂತೆ ಐ. ಎ. ರಿಚರ್ಡ್ಸ್‌ಹೀಗೆ ಪ್ರಸ್ತಾಪಿಸುತ್ತಾರೆ. "ರುದ್ರನಾಟಕವು ನಮ್ಮಲ್ಲಿ ಕರುಣೆ ಮತ್ತು ಭಯ ಈ ಭಾವನೆಗಳನ್ನು ಉದ್ರೇಕಿಸುತ್ತದೆ. ಕರುಣೆಯು ರುದ್ರನಾಯಕನ ಸಮೀಪಕ್ಕೆ ಹೋಗುವ ಪ್ರವೃತ್ತಿ, ಭಯವು ಆತ್ಮರಕ್ಷಣೆಯ ಭಾವನೆಯಿಂದುಂಟಾದ ದೂರ ಹೋಗುವ ಪ್ರವೃತ್ತಿ"ಹಾಗಾಗಿ ಯಶವಂತ ಚಿತ್ತಾಲರು ಇಂಥ ದುರಂತತೆಯ ಪರಿಕಲ್ಪನೆಯನ್ನು ತಮ್ಮ ಕಥೆಗಳ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಇಲ್ಲಿ ಮೂಡಿ ಬರುವ ದುರಂತ ಕಲ್ಪನೆಯು ಮನುಷ್ಯ ಸಹಜವಾದ ಮನುಷ್ಯತ್ವದ ಪ್ರಶ್ನೆಯನ್ನು ಎತ್ತುತ್ತದೆಯಲ್ಲದೇ, ಈ ಪರಿಕಲ್ಪನೆಯಡಿಯಲ್ಲಿ ಬರುವ ಪಾತ್ರಗಳನ್ನು ಮಾನವೀಯ ನೆಲೆಯಲ್ಲಿ ಅಭಿವ್ಯಕ್ತಿಸುತ್ತದೆ.

ಈ ಹಿನ್ನಲೆಯಲ್ಲಿ ಚಿತ್ತಾಲರ ಕಥೆಯಲ್ಲಿ ಹೊರ ಹೊಮ್ಮುವ ಸ್ತ್ರೀ ಪಾತ್ರ ದುರಂತದ ತೀವ್ರತೆಯ ಅರಿವಿನ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಅಲ್ಲದೇ ಈ ಕಥೆಯಲ್ಲಿ ಮೂಡಿಬರುವ ಸ್ತ್ರೀಯೊಂದಿಗೆ ಪುರುಷ ಧೋರಣೆ ಹೇಗೆ ಕೆಲಸ ಮಾಡಿವೆ ಎಂಬುದನ್ನು ಚರ್ಚಿಸಲಾಗಿದೆ. ಸ್ತ್ರೀಯ ಬದುಕಿನ ದುರಂತಕ್ಕೆ ಪುರುಷ

ಹೇಗೆ ಕಾರಣನಾಗುತ್ತಾನೆಂಬಸೂಕ್ಷ್ಮ ವಿಚಾರದ ಮಂಡನೆಯು ಈ ಸಂಶೋಧನಾ ಲೇಖನದ ಮುಖ್ಯ ಉದ್ದೇಶವಾಗಿದ್ದು, ಅದರ ವ್ಯಾಪ್ತಿಯಲ್ಲಿ ಚಿತ್ತಾಲರ ಕಥೆ ಮೂಡಿಬಂದಿರುವುದು ನಿಜಕ್ಕೂ ಸಮಾಜ ವ್ಯವಸ್ಥೆಯ ಕ್ರೂರತೆಗೆ ಹಿಡಿದ ಕೈಗನ್ನಡಿಯಂತಿದೆಯಲ್ಲದೇ ಈ ಕ್ರೂರತ್ವವನ್ನು ಕಳಚಿಕೊಂಡು ಮನುಷ್ಯತ್ವದ ಮೇರುವನ್ನು ತಲುಪಬೇಕಿದೆ.

ದುರಂತ ಪ್ರಜ್ಞೆ ಮತ್ತು ಕರುಣೆ ಇವೆರಡೂ ಭಾವಾಭಿವ್ಯಕ್ತವಾಗುವ ನಿರೂಪಣಾತ್ಮಕ ಕಥೆಯನ್ನು ಯಶವಂತ ಚಿತ್ತಾಲರು ತಮ್ಮ ಬರವಣಿಗೆಯಲ್ಲಿ ಮೂಡಿಸಿ, ಮನುಷ್ಯನ ಕ್ರೂರತ್ವ ಹಾಗೂ ಮನುಷ್ಯತ್ವದ ಬಗೆಗಿನ ಪ್ರಶ್ನೆ ಎತ್ತುವುದು ಮನುಷ್ಯ ನೆಲೆಯ ಚಿಂತನೆಯಾಗಿದೆ. ಸಾಮಾಜಿಕ ನೆಲೆಗಟ್ಟಿನಲ್ಲಿ ಜೀವನ ಮೌಲ್ಯಗಳನ್ನಾಧರಿಸಿದ ಮನುಷ್ಯನ ಸ್ಥೂಲವಾದ ಚೌಕಟ್ಟನ್ನು ಗಮನಿಸಿದಾಗ ಕೆಲವೊಮ್ಮೆ ಆತನ ಮುಖವಾಡದ ಹಿಂದಿರುವ ಪುರುಷ ಸ್ವಾರ್ಥ, ದರ್ಪ, ಅಹಂಗಳ ಸ್ವರೂಪವನ್ನು ಮೌಲ್ಯಗಳ ಜೊತೆಯಲ್ಲಿ ಪರೀಕ್ಷಿಸುವ ಕಾರ್ಯವು ಚಿತ್ತಾಲರ ಸಾಹಿತ್ಯ ಕುಂಚದಲ್ಲಿ ನಡೆದಿರುವುದು ಸ್ವೀಕಾರಾರ್ಹ. ಪುರುಷ ಪ್ರಧಾನ ಸಮಾಜದ ಸ್ವಾರ್ಥ, ದರ್ಪ, ಅಹಂಗಳಿಗೆ ಒಳಗಾಗಿ ಸ್ತ್ರೀಯ ಮನದಾಳದ ನೋವನ್ನು ಹೊರಹಾಕಲಾಗದ, ಅದುಮಿಡಲೂ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಅಂತಿಮವಾಗಿ ಅನುಭವಿಸುವ ದುರಂತ ಚಿತ್ರಣವನ್ನು ಉಲ್ಲೇಖಿಸುವ ಕಥೆ 'ಆಬೋಲೀನಾ'

ಚಿತ್ತಾಲರ ಕಥಾ ಸಂಕಲನದಲ್ಲಿ ಮೊದಲ ದುರಂತದ ಪ್ರಜ್ಞೆಯನ್ನು ಆಬೋಲೀನಾ ಕಥೆಯ ಮೂಲಕ ಕಟ್ಟಿಕೊಡುವಲ್ಲಿ ಕೇಡಿನ ತೀವ್ರತೆಯ ಬಗೆಗೆ ಲೇಖಕರೇ ನಿರೂಪಿಸುವಂತೆ "ಕೇಡಿನ ತೀವ್ರತೆ ಅದರಡಿಗೆ ಇದ್ದ ಪ್ರತಿಗಮನ ಪ್ರವೃತ್ತಿಯೇ ಆಗಿದೆ. ಎಲ್ಲಕ್ಕಿಂತ ಭೀಕರವಾದ ಕೇಡು ಬದುಕನ್ನು ನಾಶ ಮಾಡುವತ್ತ ಮುಖ ಮಾಡಿದ್ದು, ಜೀವ ವಿರೋಧಿಯಾದದ್ದು; ಸಾವನ್ನು ಪ್ರೀತಿಸುವಂಥದ್ದು; ಗರ್ಭಾಶಯಕ್ಕೆ, ಮಣ್ಣಿಗೆ, ಜೀವಧಾರಣೆಯನ್ನೇ ಅಸಾಧ್ಯ ಮಾಡುವ ಅಚೇತನ ವಸ್ತು ರೂಪಕ್ಕೆ ಹಿಂತಿರುಗುವ ಹಂಬಲವುಳ್ಳದ್ದು. ತನ್ನನ್ನು ತಾನು ನಾಶ ಮಾಡಿಕೊಳ್ಳಲೆಳೆಸುವ ಆತ್ಮಘಾತಿಯಾದ ಇದರ ಒಲವು ಮನುಷ್ಯನನ್ನು ಬದುಕಿನ ವೈರಿಯನ್ನಾಗಿಸುತ್ತದೆ."

ಆಬೋಲೀನಾ ಕಥೆಯಲ್ಲಿ ಇಂಥ ಕೇಡಿಗೆ ಒಳಪಡಿಸುವ ಪುರುಷ ಮನಸ್ಸಿನ ವಿಕೃತಿ ಮತ್ತು ಕೇಡಿಗೆ ಒಳಪಡುವ ಸ್ತ್ರೀಯ ದುರಂತತೆ ಇವೆರಡೂ ಸಾಮಾಜಿಕ ನೆಲೆಗಟ್ಟಿನಲ್ಲಿ ನಿರೂಪಿತಗೊಳ್ಳುವ ಮಾರ್ಗದಲ್ಲಿ ಕಥಾಹಂದರ ಸಾಗಿದೆ. ಅಬ್ಬಲಿ ಹೂವನ್ನು ನೆನಪಿನಂಗಳಕ್ಕೆ ತೆಗೆದುಕೊಂಡು ಗೆಳತಿ ಆಬೋಲೀನಾಳ ದುರಂತತೆಯನ್ನು ನಿರೂಪಿಸುವ ನಿರೂಪಕಿಯಿಂದ ಕಥೆ ಪ್ರಾರಂಭ ಕಂಡು, ಸ್ತ್ರೀಯ ಭಾವಕೋಶ ಹೊರಹಾಕುವ ಪ್ರಯತ್ನ ನಿರೂಪಕಿಯ ಸ್ಥಾನದೊಂದಿಗೆ ಹೆಣೆಯಲ್ಪಡುತ್ತದೆ.

ಹಳ್ಳಿಯ ವಾತಾವರಣದಲ್ಲಿ ಬೆಳೆದ ಮುಗ್ಧ ಮನಸ್ಸಿನ, ಹೂವಿನ ಸೂಕ್ಷ್ಮತೆಯುಳ್ಳ ಕ್ರೈಸ್ತಧರ್ಮಕ್ಕೆ ಸೇರಿದ ಹೆಣ್ಣು ಮಗಳೊಬ್ಬಳ ದುರಂತ ಕಥೆಯಿದಾಗಿದ್ದು, ಈ ಕಥೆಯ ಸ್ತ್ರೀ ಪಾತ್ರವಾಗಿ ಒಡಮೂಡುವ ಆಬೋಲೀನಾ ಬದುಕಿನಲ್ಲಿ ಕಂಡ ದುರಂತ ಸನ್ನಿವೇಶಭಾವುಕರಲ್ಲಿ ಕರುಣೆಯ ಕೋಡಿಯನ್ನೇ ಹರಿಸುತ್ತದೆ. ನಿರೂಪಕಿಯ ಮೂಲಕ ಆಬೋಲೀನಳ ಕಥಾ ಪಯಣ ಸಾಗುವ ರೀತಿ ಅಂತಿಮದಲ್ಲಿ ಪಡೆದುಕೊಳ್ಳುವ ಸ್ವರೂಪ ಸ್ತ್ರೀಯ ದುರಂತದ ತೀವ್ರತೆಯನ್ನು ಪ್ರಕಟಿಸುತ್ತದೆ.

ಸಾಮಾಜಿಕ ವ್ಯವಸ್ಥೆಯೊಳಗೆ ಸ್ತ್ರೀ ಬದುಕಿನ ಹಲವು ಘಟ್ಟಗಳಲ್ಲಿ ಮದುವೆ ಬಂಧನ ಕೂಡ ಪ್ರಮುಖ ಘಟ್ಟವಾಗಿದೆ. ಬದುಕಿನಲ್ಲಿ ಮದುವೆಯ ಬಂಧನಕ್ಕೇರ್ಪಡುವ ಪ್ರತಿಯೊಬ್ಬರ ಮನೋಭಿಲಾಷೆಯು ತನ್ನದೇ ಆದ ಭಾವನಾತ್ಮಕ ಸ್ವರೂಪ ಪಡೆಯುವುದು ಸಹಜ. ಆ ನಿಟ್ಟಿನಲ್ಲಿ ಮನುಷ್ಯ ವಾಸ್ತವವಾಗಿ ಬದುಕಿನಲ್ಲಿ ಬಾಳ ಸಂಗಾತಿಯಾಗಿ ಬರುವ ಹೆಣ್ಣಾಗಲಿ, ಗಂಡಾಗಲಿ ಒಂದು ಕಲ್ಪನಾಲೋಕದಲ್ಲಿ ವಿಹರಿಸುತ್ತಾರೆ. ಅಂಥ ಭಾವನಾ ಲೋಕದೆಡೆಗೆ ಒಯ್ಯುವ ಪವಿತ್ರ ಬಂಧನವೆಂದು ಕರೆಯಲ್ಪಡುವ ಭಾರತೀಯ ಸಂಪ್ರದಾಯದಲ್ಲಿ ಮದುವೆಯ ಪರಿಕಲ್ಪನೆಯೇ ಮೂಡಿರದ ಸಣ್ಣ ವಯಸ್ಸಿನ ಆಬೋಲೀನಳ ಮದುವೆಯ ಪ್ರಸಂಗ ಈಡೀ ಬದುಕನ್ನೇ ಯಾತನಮಯವಾಗಿಸುತ್ತದೆ.

ಇಂಥ ಮದುವೆಯೆಂಬ ಬಂಧನಕ್ಕೊಳಪಟ್ಟ ನಿರಪರಾಧಿಯಾದ ಆಬೋಲೀನಳ ಜೀವನ ದುರಂತವಾದದ್ದು ಶೋಚನೀಯ. ಇಬ್ಬರು ಹೆಂಡತಿಯರನ್ನು ಕಳೆದುಕೊಂಡು ದುರ್ವ್ಯಸನಿಯಾದ ಅದೇ ಧರ್ಮದ 30 ವರ್ಷದ ಮೇಲಾಗಿರುವ ಮನವೇಲನಿಗೆ 14 ವರ್ಷದ ಆಬೋಲೀನಳನ್ನು ಕೊಟ್ಟು ಮದುವೆ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡುವ ಆತನ ಸ್ವಾರ್ಥಕ್ಕೆ ಮುಗ್ಧ ಹುಡುಗಿ ಬಲಿಪಶುವಾದ ಸಂಗತಿ ಈ ಕಥೆಯಲ್ಲಿ ಸ್ಪಷ್ಟವಾಗುತ್ತದೆ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕುವ ಆಬೋಲೀನಾಳ ತಂದೆ, ಸಮಾಜದ ನಿಂದನೆಗೆ ಭಯ ಪಡುವ ಮನಸ್ಥಿತಿ, ತನ್ನ ಮುಗ್ಧತೆ, ಅಂತರ್ಯದಲ್ಲಿ ಮೂಡಿದ ಆತಂಕ, ಮನವೇಲನ ಸ್ವಾರ್ಥತೆ, ಚರ್ಚಿನ ಮೌಢ್ಯತೆ ಇವೆಲ್ಲವೂ ಆಬೋಲೀನಾಳ ಬದುಕನ್ನು ದುರಂತವಾಗಿಸಲು ಕಾರಣವಾಗುತ್ತದೆ.

ಆಬೋಲೀನಳ ಮುಗ್ಧತೆಯನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ ಮನವೇಲ, ಒಮ್ಮೆ ದೇಗುಲ ಪಡಸಾಲೆಯ ಮೂಲೆಯೊಂದರಲ್ಲಿ ಸುರಗೀಕಾಯಿಗಳನ್ನು ಹೆಕ್ಕಿ ಬಿಸಿಲಿನ ಝಳಕ್ಕೆ ಬಳಲಿದ ಆಕೆ ನೆರಳಿಗಾಗಿ ಕುಳಿತ ಜಾಗದಲ್ಲೇ ನಿದ್ದೆ ಮಂಪರಿಗೆ ಜಾರಿದಾಗ ಹದ್ದಿನಂತೆ ಆಕ್ರಮಿಸಿದವನೆ ಆಕೆಯ ತುಟಿಯಲ್ಲಿ ತುಟಿಯಿಟ್ಟು ಸಂಶಯದ ಬೀಜವೊಂದನ್ನು ಬಿತ್ತುತ್ತಾನೆ. ಆಬೋಲೀನಾಳ ಮುಗ್ಧತೆಯನ್ನೇ ಬಂಡವಾಳವನ್ನಾಗಿಸಿಕೊಳ್ಳುವ ಮನವೇಲ ತನ್ನ ಸ್ವಾರ್ಥ ಸಾಧನೆಗೆ ಆಕೆಯನ್ನು ಬಲಿಪಶುವಾಗಿಸುತ್ತಾನೆ.

"ಆಬೋಲೀನಾ ಎಚ್ಚರಾಗಿ ಕಣ್ಣು ತೆರೆಯುವ ಮೊದಲೇ ಮನವೇಲನ ಪಾಪಯುಕ್ತ ತುಟಿಗಳು ಅವಳ ತುಟಿಗಳನ್ನು ಮುದ್ದಿಸುತ್ತಿದ್ದವು. ಅವನ ಉನ್ಮತ್ತ ಕೈಗಳು ಅವಳ ಅಂಗಾಂಗಗಳ ಮೇಲೆ ಆಡ ಹತ್ತಿದ್ದವು. ಗಂಡಸಿನ ಆಲಿಂಗನದ ಈ ಅನುಭವವು ಆಬೋಲೀನಳ ಕಲ್ಪನೆಗೂ ಮೀರಿದ್ದು. ಅನೂಹ್ಯವಾಗಿ, ಅಚಾನಕವಾಗಿ ಒದಗಿದ ಈ ಘಟನೆಯಿಂದ ಅವಳು ಥಥ್ಥರ ನಡುಗಿದಳು. ಅಯ್ಯೋ ಎಂದು ಚೀರುತ್ತ ಅವಳು ಬಿಡಿಸಿಕೊಳ್ಳುತ್ತಿರುವಾಗ ಮನವೇಲ ಅಂದಿದ್ದ ದುಶ್ಯಾಸನ ನಗೆ ನಗುತ್ತ: ಈಗಲಾದರೂ ಒಪ್ಪುತ್ತೀಯೋ ಇಲ್ಲವೋ ನನ್ನನ್ನು ಮದುವೆಯಾಗಲು "ನನ್ನ ಎಂಜಲು ನಿನ್ನ ತುಟಿಯಲ್ಲಿದೆ. ಈಗ ನೀನು ಬಸುರಾಗುತ್ತಿ" ಎನ್ನುವ ಮನವೇಲ ಕಾಮುಕ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾನೆ. ಪುರುಷ ತನ್ನ ಅಧೀನಕ್ಕೆ ಸ್ತ್ರೀಯನ್ನು ಒಳಪಡಿಸುವಲ್ಲಿ ಹೂಡುವ ಸಂಚು ಹಾಗೂ ಹೆಣ್ಣಿನ ಅಮಾಯಕತೆ, ಅಸಹಾಯಕತೆಯ ಲಾಭ ಪಡೆಯುವ ಪುರುಷ ಮನಸ್ಥಿತಿಯ ಕ್ರೂರತ್ವವನ್ನು ಪರಿಚಯಿಸುತ್ತದೆ.

ಮೇಲಿಂದ ಮೇಲೆ ಆತಂಕಕ್ಕೊಳಪಡಿಸುವ ಮನವೇಲ ಸಂದರ್ಭ ಒದಗಿ ಬಂದಾಗಲೆಲ್ಲ ಆಬೋಲೀನಳಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಾನೆ. "ಮನವೇಲ ತನ್ನ ಗುಂಡು ಅಂಗೈಯನ್ನು ಹುಡುಗಿಯ ಹೊಟ್ಟೆಯ ಮೇಲೆ ಆಡಿಸಿ ಅಂದಿದ್ದ ನಟಿಸಿದ ಭಯದ ದನಿಯಲ್ಲಿ: 'ಅರೇ ನಿನಗೆ ಹೊಟ್ಟೆ ಬಂದಿದೆ– ನೀನು ಬಸುರಿ!!ಎರಡು ತಿಂಗಳಾದರೂ ಆಗಿರಬೇಕು. ಅಯ್ಯೋ! ನಾನಂದು ಬರಿಯ ಚೇಷ್ಟೆಗೆ ಅಂದ ಮಾತು ನಿಜವಾಗಬೇಕೇ? ಇದೇನನರ್ಥ!' ಎಂದವನೇ ಮನವೇಲ ಹುಡುಗಿಯನ್ನುತನ್ನ ಅಪ್ಪುಗೆಯಿಂದ ಚೆಲ್ಲಿಕೊಟ್ಟು ತನಗೆ ಒಪ್ಪಗೆಯಿಲ್ಲದ ಅನರ್ಥ ನಡೆಯಿತೆನ್ನುವ ಭಯ

. ತಾತ್ಸಾರ ನಟಿಸುತ್ತ ಅಲ್ಲಿಂದ ಜಾರಿಕೊಂಡ. " ಈ ಪ್ರವೃತ್ತಿಯೇ ಮನವೇಲನ ದುಷ್ಟತೆಯನ್ನು ಪ್ರತಿನಿಧೀಕರಿಸುತ್ತದೆ. ತನ್ನ ತಪ್ಪಿಲ್ಲವೆಂಬಂತೆ ಸ್ತ್ರೀಯನ್ನೇ ಆರೋಪಿಯನ್ನಾಗಿಸುವ ಪುರುಷತಂತ್ರದ ಸ್ಥಿತಿ ಅಭಿವ್ಯಕ್ತವಾಗುತ್ತದೆ. ಹೀಗೆ ಆಬೋಲೀನಳ ಮುಗ್ಧತೆಯೇ ಆಕೆಗೆ ಕಂಟಕವಾಗಿಯೂ ಒದಗಿ ಬರುತ್ತದೆ.

ಆಬೋಲೀನಳನ್ನು ಸ್ವಾರ್ಥಕ್ಕೆ ಬಳಸಿಕೊಂಡ ಮನವೇಲ ವೈಯಕ್ತಿಕ ನೆಲೆಯಲ್ಲಿ ಕಂಡುಬಂದರೂ ಆತ ಸಾಮಾಜಿಕ ವ್ಯವಸ್ಥೆಯೊಳಗೆ ಯಾವುದೇ ನಿಂದನೆಗೆ ಗುರಿಯಾಗದಿರುವುದು ಪುರುಷ ಪ್ರಧಾನ ಸಮಾಜದ ಪ್ರಾಬಲ್ಯತೆಯನ್ನು ಮೆರೆಯುತ್ತದೆ. ಕಥೆಯ ಅಂತಿಮದಲ್ಲಿಯೂ ತನ್ನ ಕಾರ್ಯದ ಬಗೆಗಿನ ತಂತ್ರಗಾರಿಕೆಯಿಂದ ಸಮಾಜಕ್ಕೆ ಮನದಟ್ಟಾಗದ ರೀತಿಯಲ್ಲಿ ನಿಗೂಢವಾಗಿರಿಸುವ ಆ ತಂತ್ರಗಾರಿಕೆ ಬಯಲಿಗೆ ಬರುವ ಸಂದರ್ಭದಲ್ಲಿ ಆಬೋಲೀನಳನ್ನೇ ಆರೋಪಿ ಸ್ಥಾನದಲ್ಲಿರಿಸಿ ತನ್ನನ್ನು ಸಮರ್ಥನೆ ಮಾಡಿಕೊಳ್ಳುವ ಮನವೇಲ ದೌರ್ಜನ್ಯದ ಪ್ರತೀಕವಾಗಿ ಕಾಣಿಸಿಕೊಳ್ಳುತ್ತಾನೆ. ಆದರೂ ಮನವೇಲನ ಮಾತನ್ನೇ ಸ್ವೀಕರಿಸುವ ಸಮಾಜದ ಸುತ್ತಲಿನ ವಾತಾವರಣವನ್ನು ಪುರುಷ ತನಗೆ ಬೇಕಾದಂತೆ ಬದಲಾಯಿಸಿಕೊಂಡಿರುವ, ನಿರ್ಮಾಣ ಮಾಡಿಕೊಂಡಿರುವ ಮನಸ್ಥಿತಿಯನ್ನು ಸಾದರಪಡಿಸುತ್ತದೆ.

ಆಬೋಲೀನಾಳು ಮನವೇಲನ ತೋಳಬಂದಿಯಲ್ಲಿರುವುದನ್ನು ಕಂಡದೀವರ ಹೆಂಗಸರು ಆಕೆಯನ್ನು ಜರಿಯುವ ಸಂದರ್ಭ, ಪುರುಷ ಮೌಲ್ಯಗಳು ಸ್ತ್ರೀಯ ಆಲೋಚನೆಗೆ ಗುರಿಪಡಿಸುವ ನಿಜಸ್ಥಿತಿ ಗೋಚರವಾಗುತ್ತದೆ. ಪರಮೇಶ್ವರಿ ಆಬೋಲೀನಳು ಮುಗ್ಧಳು, ಬುದ್ಧಿವಂತಿಕೆಯುಳ್ಳವಳಲ್ಲವೆಂದು ದೀವರ ಹೆಂಗಸಿಗೆ ಹೇಳಿದಾಗ ಆಕೆ ನೀಡುವ ಪ್ರತ್ಯುತ್ತರ ಸಹಜವಾಗಿ ಸಮಾಜ ದೂರುವ ಸ್ಥಿತಿಯೇ ಆಗಿದೆ. "ನೀನು ಸುಮ್ಮನಿರೆ, ನನಗೆ ಹೇಳಬೇಡ ಅದರ ಅಪ್ಪಂತತನ. ಕಿರಸ್ತಾನದ ಹುಡುಗಿ! ಈಗೆಲ್ಲ ತಿಳೀತು. ಅಂದು ದೇವಸ್ಥಾನದಲ್ಲಿ ತೆಣೆಯ ಮೇಲೆ ಗಂಡಸಿನ ಜೊತೆಗೆ ಮಲಗಿದ ಹಾದರಗಿತ್ತಿ ಇವಳೇ! ನಾನು ಗದ್ದೆಯಿಂದ ಮನೆಗೆ ಹೋಗುತ್ತೇನೆ;ಇವರು ಥೂ! ನನಗಂದು ಯಾರೆಂದು ತಿಳಿಯಲಿಲ್ಲ. 'ಪಾಪ ಪಾಪ'ಎನ್ನುತ್ತ ಕಣ್ಣು ಮುಚ್ಚಿಕೊಂಡೇ ಮನೆಗೆ ನಡೆದೆ"ಎನ್ನುವ ಮಾತುಗಳು ಸ್ತ್ರೀಯನ್ನು ಮಾತ್ರ ದೂಷಣೆಗೆ ಗುರಿಪಡಿಸುವಂತೆ ಭಾಸವಾಗುತ್ತದೆ.

ಮನವೇಲನೊಡನಿದ್ದ ಆಬೋಲೀನಳನ್ನು ಹಾದರಗಿತ್ತಿ ಎಂದು ನಿರೂಪಿಸುವ ದೀವರ ಹೆಂಗಸು, ಗಂಡಸಿಗೆ ಮಾತ್ರ ಯಾವುದೇ ಹಣೆಪಟ್ಟಿಯನ್ನಿಡದಿರುವುದು, ಪುರುಷ ಧೋರಣೆಯನ್ನು ತಮ್ಮದೇ ಎನ್ನುವ ರೀತಿಯಲ್ಲಿ ಸ್ತ್ರೀಯ ಆಲೋಚನಾ ಲಹರಿಯನ್ನು ಮಾರ್ಪಡಿಸಿಕೊಂಡಿರುವ ಪುರುಷ ಪ್ರಧಾನ ಮನಃಸ್ಥಿತಿಯ ಸ್ಪಷ್ಟತೆ ಮೂಡಿ ಬರುತ್ತದೆ. ತಂತ್ರಗಾರಿಕೆಯಿಂದ ಆಬೋಲೀನಳನ್ನು ವರಿಸಿದ ಮನವೇಲ ಒಂದು ಹೆಣ್ಣಿನ ಬಾಳಿಗೆ ಕಂಟಕಪ್ರಾಯ ವ್ಯಕ್ತಿಯಾಗುತ್ತಾನೆ. ಮದುವೆಯ ನಂತರದಲ್ಲಿ ಮನವೇಲನ ಮನೆಯವರಿಗೆ ಆಬೋಲೀನ ಬಸುರಿಯಲ್ಲವೆಂದು ತಿಳಿದಾಗ, ತನ್ನನ್ನು ಮದುವೆಯಾಗುವ ಸಲುವಾಗಿ ಬಸುರಿಯೆಂದು ಸಮಾಜಕ್ಕೆ ಬಿಂಬಿಸಿ ತನ್ನನ್ನೇ ಮೋಸಗೊಳಿಸಿರುವುದಾಗಿ ಸತ್ಯವನ್ನೇ ತಿರುಚುವ ಮನವೇಲನ ಕುತಂತ್ರ, ಆಬೋಲೀನಳು ಆತ್ಮಹತ್ಯೆಯಂಥ ದುರಂತದೆಡೆಗೆ ಹೋಗಲು ಪ್ರೇರೇಪಿಸುತ್ತದೆ. ಪ್ರತಿ ಹಂತದಲ್ಲಿಯೂ ಸಮಾಜ ನಿಂದನೆಗಳಿಗೆ ಗುರಿಯಾಗಿ, ಮಾಡಿರದ ತಪ್ಪಿಗೆ ತಲೆಗೊಟ್ಟು ನಿಲ್ಲುವ ಆಬೋಲೀನಾ ಕಥೆಯ ಕೊನೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದು ಸಮಾಜದ ನಿರಪರಾಧಿಯಾದ ಒಬ್ಬ ಹೆಣ್ಣು ಮಗಳ ದುರಂತತೆಯನ್ನು ಪ್ರಮಾಣೀಕರಿಸುತ್ತದೆ.

ಎಲ್. ಎಸ್. ಶೇಷಗಿರಿರಾವ್ ರವರು ನಿರೂಪಿಸುವಂತೆ "ಕ್ರಿಯೆಯೇ ಸಮಾಜದ ಪಾತ್ರವೂ ಇದ್ದು ಆ ಪಾತ್ರದ ಬಗ್ಗೆ ಅಸಮಾಧಾನ, ತಿರಸ್ಕಾರಗಳಿದ್ದರೂ ಮುಖ್ಯ ಒತ್ತು ಬೀಳುವುದು ಬಲಿಪಶುವಿನ ಯಾತನೆಯ ಮೇಲೆ" ಎಂಬುದು ಒಟ್ಟು ಕಥೆಯ ದುರಂತತೆಯನ್ನು ಬಿಂಬಿಸುವಲ್ಲಿ ಸಹಕಾರಿಯಾಗಿದೆ. ಹೀಗೆ ಬದುಕಿನಲ್ಲಿ ಸುಖವನ್ನು ಬಯಸಿ ಬರುವ ಹೆಣ್ಣಿನ ಅಂತ್ಯ ಘೋರತೆಯ ತಿರುವು ಪಡೆದುಕೊಳ್ಳುವ ಬಗೆ, ಶೋಷಣೆಯ ಕೂಪದಲ್ಲಿ ಬಿದ್ದು, ಬದುಕಿನುದ್ದಕ್ಕೂ ನರಳುವ, ಮಾನಸಿಕ ವೇದನೆಯನ್ನು ಬಹಿರಂಗಗೊಳಿಸಲಾಗದ ಹೆಣ್ಣಿನ ಶೋಚನೀಯ ಸಂಗತಿಯ ವಿಶ್ಲೇಷಣೆಯಿದೆ. ಮನುಷ್ಯ ಮನುಷ್ಯತ್ವವನ್ನು ಮೀರಿ ನಮ್ರತೆಯ ಮುಖವಾಡ ಧರಿಸಿ ಕ್ರೂರತೆಯನ್ನು ಮೆರೆಯುವ ಸತ್ಯತೆ ಇಲ್ಲಿ ದರ್ಶಿಸಲಾಗಿದೆ. ಸ್ತ್ರೀಯ ಭಾವನೆಯ ತುಚ್ಛೀಕರಿಸುವ ಕೆಲವು ಪುರುಷ ಮನಸ್ಸುಗಳ ಧೋರಣೆ ಇಲ್ಲಿ ಕಾಣಬಹುದು. ಸ್ತ್ರೀಯನ್ನು ಬಲಿಪಶುವಾಗಿಸುವ, ನರಕ ಕೂಪಕ್ಕೆ ತಳಲ್ಪಡುವ ಪುರುಷ ಪ್ರಧಾನ ಸಮಾಜದ ವಾಸ್ತವ ನೆಲೆ ಕೂಡ ಇಲ್ಲಿ ಧ್ವನಿತವಾಗಿರುವುದನ್ನು ವಿವರಿಸಲಾಗಿದೆ. ಪುರುಷನ ಈ ಕ್ರೂರತೆ, ಕೇಡಿನ ಪರಾಕಾಷ್ಠೆ, ಅಹಂ ಇವೆಲ್ಲವು ಕಳಚಿಕೊಳ್ಳದ ಹೊರತುಮನುಷ್ಯನಲ್ಲಿ ಮನುಷ್ಯತ್ವ ನೆಲೆಗೊಳ್ಳದೆಂಬ ಸತ್ಯ, ವಾಸ್ತವವನ್ನು ಇಂದಿಗೂ ಸಮಾಜ ಅರಿಯಬೇಕಾಗಿದೆ. ಆ ನಿಟ್ಟಿನಲ್ಲಿ 'ಆಬೋಲೀನಾ' ಕಥೆ ದುರಂತ ಪರಿಕಲ್ಪನೆಯ ಒಂದು ಭಾಗವಾದ ಕರುಣೆಯನ್ನು ಸಾರುತ್ತಲೇ ಮನುಷ್ಯ ನಡವಳಿಕೆಯನ್ನು ಎಚ್ಚರಿಸುವ ಭಾವ ಸೂಕ್ಷ್ಮವಾಗಿಯೇ ಬಿತ್ತರಗೊಂಡಿದೆ.

## ಉಲ್ಲೇಖಗಳು


1. ಯಶವಂತ ಚಿತ್ತಾಲ: ಐವತ್ತೊಂದು ಕತೆಗಳು– ಗೀತಾಬುಕ್‌ಹೌಸ್‌ಮೈಸೂರು 2000
2. ಎಲ್. ಎಸ್. ಶೇಷಗಿರಿರಾವ್: ಅನುಶೀಲನ–ವಸಂತ ಪ್ರಕಾಶನ ಬೆಂಗಳೂರು 2006
3. ಯಶವಂತ ಚಿತ್ತಾಲ: ಅಂತಃಕರಣ ಕ್ರೈಸ್ಟ್‌ಯೂನಿವರ್ಸಿಟಿ ಬೆಂಗಳೂರು 2009
4. ಸಿ. ಎನ್. ರಾಮಚಂದ್ರನ್:ಸಾಹಿತ್ಯ ವಿಮರ್ಶೆ ಪಾರಿಭಾಷಿಕ ಮಾಲೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು 2000
5. ನರಹಳ್ಳಿ ಬಾಲಸುಬ್ರಹ್ಮಣ್ಯ: ನವ್ಯತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು 1992
6. ಎಲ್. ಜಿ. ಮೀರಾ:ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ ಶಕ್ತಿ ಪ್ರಿಂಟರ್ಸ್, ಲಗ್ಗೆರೆ ಬೆಂಗಳೂರು 2004
7. ಡಾ. ಗೋಪಾಲ ಕೃಷ್ಣಯ್ಯ. ಕೆ. ಎಲ್, ಡಾ. ಪ್ರಧಾನ್‌ಗುರುದತ್ತ(ಸಂ):ಯಶವಂತ ಚಿತ್ತಾಲ ನವಕರ್ನಾಟಕ ಪ್ರಕಾಶನ ಬೆಂಗಳೂರು 2005